ಆ) ಡಾ ನಂಜುಂಡಪ್ಪ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿ ವರದಿಯ ಪ್ರಕಾರ ರಾಜ್ಯದಲ್ಲಿ 318 ಪಶುವೈದ್ಯ ಸಂಸ್ಥೆಗಳು ಕೊರತೆ ಇವೆ ಇವುಗಳು ಯಾವ ತಾಲ್ಲೂಕುಗಳಲ್ಲಿ ಕೊರತೆ ಇವೆಯೇ ಆ ತಾಲ್ಲೂಕುಗಳಲ್ಲಿ ಆದ್ಯತೆ ಮೇಲೆ 8 ವರ್ಷಗಳ ಅವಧಿಯಲ್ಲಿ ತೆರೆಯಲು ಕಾರ್ಯಕ್ರಮ ಸರ್ಕಾರದಲ್ಲಿದೆ

ಇ) ಪಾವಗಡ ತಾಲ್ಲೂಕು ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿ ವರದಿಯ ಪ್ರಕಾರ ಅತಿ ಹೆಚ್ಚು ಹಿಂದುಳಿದ ತಾಲ್ಲೂಕು ಆಗಿದ್ದು, 81,481 ಜಾನುವಾರು ಘಟಕಗಳಿವೆ ಪ್ರತಿ 5000 ಜಾನುವಾರುಗಳಿಗೆ ಒಂದು ಘಟಕದಂತೆ 16 ಪಶುವೈದ್ಯ ಸಂಸ್ಥೆಗಳಿರಬೇಕಾಗಿದೆ ಹಾಲಿ 17 ಸಂಸ್ಥೆಗಳು ಪಾವಗಡ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಪಾವಗಡ ತಾಲ್ಲೂಕು ಸೇರಿದಂತೆ ಪಶುವೈದ್ಯ ಶಾಲೆ ಕೊರತೆ ಇಲ್ಲದೆ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ತೆರೆಯಲು ಇನ್ನೂ ಯಾವುದೇ ಕಾಲಮಿತಿ ನಿಗಧಿಪಡಿಸಿರುವುದಿಲ್ಲ

ಈ) ಇಲಾಖೆಯಲ್ಲಿ ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ / ಕೃತಕ ಗರ್ಭದಾರಣಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯ ಮೇಲ್ದರ್ಜೆಗೇರಿಸುವ ಕಾರ್ಯಕ್ರಮವಿದ್ದು ಹಂತ ಹಂತವಾಗಿ ಅನುಷ್ಠಾನವಾಗಬೇಕಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ

ಉ) ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ವೇಳೆಯಲ್ಲಿ ಕೊಂಡೇತಿಮ್ಮನಹಳ್ಳಿಯನ್ನು ಮೇಲ್ದರ್ಜೆಗೇರಿಸಲು ಪರಿಗಣಿಸಲು ಕ್ರಮ ವಹಿಸಲಾಗುವುದು

648 (712) ಶ್ರೀ ಉಮಾಪತಿ ಎ ಎ (ಹೊಳಲ್ಕೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಹಾಗೂ ಪ್ರೌಢ (ಶಿಕ್ಷಣ) ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗ ವಿದ್ಯಾರ್ಥಿನಿಲಯಗಳು ಇವೆಯೇ?

ಆ) ಹಾಗಿದ್ದಲ್ಲಿ ಹೊಸದಾಗಿ ವಿದ್ಯಾರ್ಥಿ ನಿಲಯಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು).

ಅ) ಇಲ್ಲ

ಆ) ಹೌದು

ಇ) **ಸಮಾಜ ಕಲ್ಯಾಣ ಇಲಾಖೆ**

2006–07ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿದ ಅನುದಾನದ ಮಿತಿಯೊಳಗೆ 50 ವಿದ್ಯಾರ್ಥಿ ಸಂಖ್ಯಾಬಲದಂತೆ 50 ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಈಗಾಗಲೇ ಆದೇಶಿಸಲಾಗಿದೆ ಅಲ್ಲದೆ, ರಾಜ್ಯದಲ್ಲಿನ ಹಾಲಿ ವಿದ್ಯಾರ್ಥಿನಿಲಯಗಳಲ್ಲಿರುವ ಮೂಲಭೂತ ಸೌಲಭ್ಯಗಳನ್ನು ಪರಿಗಣನೆಗೆ ತೆಗೆದುಕೊಂಡು ತಲಾ 10 ರಿಂದ 15ರವರೆಗೆ ವಿದ್ಯಾರ್ಥಿ ಸಂಖ್ಯಾಬಲ ಹೆಚ್ಚಿಸಲೂ ಈಗಾಗಲೇ ಆದೇಶಿಸಲಾಗಿದೆ ಇದರಿಂದಾಗಿ 2006–07ನೇ ಸಾಲಿನಲ್ಲಿ ರಾಜ್ಯದ 17178 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚುವರಿಯಾಗಿ ವಿದ್ಯಾರ್ದಿಗಳಿಗೆ ಪ್ರವೇಶ ನೀಡಲಾಗಿದೆ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ 14 ಹೊಸ ವಿದ್ಯಾರ್ಥಿನಿಲಯಗಳನ್ನು ರಾಜ್ಯವಲಯ ಅನುದಾನದಿಂದ ಹಾಗೂ 10 ವಿದ್ಯಾರ್ಥಿನಿಲಯಗಳನ್ನು ಜಿಲ್ಲಾವಲಯ ಅನುದಾನದಿಂದ ಪ್ರಾರಂಭಿಸಲು ಒಟ್ಟು 24 ವಿದ್ಯಾರ್ಥಿನಿಲಯಗಳಿಗೆ 2006–07ನೇ ಸಾಲಿನಲ್ಲಿ ಮಂಜೂರಾತಿ ನೀಡಿದೆ ಮುಂದಿನ ಸಾಲುಗಳಲ್ಲಿ ವಿದ್ಯಾರ್ಥಿನಿಲಯಗಳ ಬೇಡಿಕೆ ಹಾಗೂ ಆಯವ್ಯಯ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

2006–07ನೇ ಸಾಲಿಗೆ 33 ಮೆಟ್ರಿಕ್ ಪೂರ್ವ ಹಾಗೂ 19 ಮೆಟ್ರಿಕ್ ನಂತರದ ಹೀಗೆ ಒಟ್ಟು 52 ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ ಮುಂದಿನ ಸಾಲುಗಳಲ್ಲಿ ವಿದ್ಯಾರ್ಥಿನಿಲಯಗಳ ಬೇಡಿಕೆ ಹಾಗೂ ಆಯವ್ಯಯದ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು

ಅಲ್ಪಸಂಖ್ಯಾತರ ಇಲಾಖೆ

ಅಲ್ಪಸಂಖ್ಯಾತರ ಇಲಾಖೆಯಲ್ಲಿ ಒಟ್ಟು 23 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು 2007–08ನೇ ಸಾಲಿನಲ್ಲಿ 100 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಯೋಜನೆ ಇದೆ

649 (957) ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ವಸತಿ ನಿಲಯಗಳ ಸಂಖ್ಯೆ ಎಷ್ಟು?

ಆ) ಸರ್ಕಾರದಿಂದ ನಡೆಯುತ್ತಿರುವ ಮತ್ತು ಖಾಸಗಿಯವರು ಅನುದಾನ ಪಡೆದು ನಡೆಸುತ್ತಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ಈ ಎಲ್ಲಾ ವಸತಿನಿಲಯಗಳ ನಿರ್ವಹಣೆಗಾಗಿ ಸರ್ಕಾರ ವಾರ್ಷಿಕವಾಗಿ ಖರ್ಚು ಮಾಡುವ ವೆಚ್ಚವೆಷ್ಟು?

ಈ) ಎಲ್ಲ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಲ್ಲಿನ ದುಸ್ಥಿತಿಯ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಮೆಟ್ರಿಕ್ ಪೂರ್ವ ಮತ್ತು ನಂತರದ ಮಹಿಳಾ ಹಾಸ್ಟೆಲ್‌ಗಳೆಷ್ಟು? (ಜಿಲ್ಲಾವಾರು ವಿವರ ಹಾಗೂ ಅಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ವಿವರ ಒದಗಿಸುವುದು)

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) 1 ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳ ಸಂಖ್ಯೆ 1485

2 ಹಿಂದುಳಿದ ವರ್ಗಗಳ ಇಲಾಖೆ ವತಿಯಿಂದ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ 1491

3 ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳ ಸಂಖ್ಯೆ 147

4 ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ಸಂಖ್ಯೆ 23